ಇಂದು ದಿಃ 23.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ ಎಂ ಆರ್ ವಕೀಲರಿಂದ 9 ನೇ ಪ್ರತಿವಾದಿಗಳ ಪರವಾಗಿ.**

ನಿಡಿ–10 ಪ್ರತಿವಾದಪತ್ರದಲ್ಲಿ ನಾನು ಹೇಳಿರುವ ಸಂಗತಿಗಳು ಸರಿಯಾಗಿವೆ . 9 ನೇ ಪ್ರತಿವಾದಿಯು ಸಿರಿಯಲ್ ನಂ.4 ಅನೆಕ್ಸರ್ ಸಿ ಸ್ವತ್ತನ್ನು ತಮ್ಮ ಸ್ವಂತ ಆದಾಯದಿಂದ ಕೊಂಡುಕೊಂಡದ್ದು , ಅವರು ಅದನ್ನು ಕುಟುಂಬದ ಆದಾಯದಿಂದ ಕೊಂಡುಕೊಂಡದ್ದಲ್ಲ ಎಂದು ಹೇಳುವುದು ಸರಿಯಲ್ಲ. ಅವರು ಧಾರವಾಡದ ಮಾರುಕಟ್ಟೆಯಲ್ಲಿ ಅನೆಕ್ಸರ್ ಬಿ ಸಿರಿಯಲ್ ನಂ.3 ಸ್ವತ್ತಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟಿಸುವ ಸಲುವಾಗಿ ಹಣವನ್ನು ಹೂಡಿದ ಕಾರಣ ಅವರಿಗೆ ಮೇಲೆ ಹೇಳಿದ ಬ್ಯಾಂಕಿನ ಸಾಲದ

ಕಂತುಗಳನ್ನು ಸರಿಯಾಗಿ ಕಟ್ಟಲು ಆಗಿರಲಿಲ್ಲ ಎಂದು ಹೇಳುವುದು ಸರಿಯಲ್ಲ. ನಂತರ 9 ನೇ ಪ್ರತಿವಾದಿ ನನಗೆ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಹಕ್ಕನ್ನು ಬಿಟ್ಟುಕೊಡು, ನಂತರ ತಾನು ಪೂರ್ಣ ಬ್ಯಾಂಕಿನ ಸಾಲದ ಹಣವನ್ನು ಪಾವತಿ ಮಾಡುತ್ತೇನೆ ಎಂದು ನನ್ನನ್ನು ಕೇಳಿದ್ದರು , ಅದಕ್ಕೆ ನಾನು ಒಪ್ಪಲಿಲ್ಲ ಎಂದು ಹೇಳುವುದು ಸರಿಯಲ್ಲ. ಸದರಿ ಸಾಲವನ್ನು ರೀಶೆಡ್ಯೂಲ್ ಮಾಡಲು 9 ನೇ ಪ್ರತಿವಾದಿ ನನ್ನನ್ನು ಕೇಳಿದ್ದರು ಎಂದು ಹೇಳುವುದು ಸರಿ ಇದೆ. ಬ್ಯಾಂಕಿನವರು ನನ್ನನ್ನು ಕರೆದು ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಒತ್ತಡ ತಂದಾಗ ನಾನು ಅವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿ ಸಾಲದ ಹಣಕ್ಕೆ ಜಮಾ ಮಾಡಿ ಎಂದು ಹೇಳಿದ್ದೆ.2005-2006 ರಲ್ಲಿ 9 ನೇ ಪ್ರತಿವಾದಿಯ ಮಗ ಮಯೂರ ರೇಗೆ ರವರು ಬೆಂಗಳೂರಿನ ಟೊಯೊಟೊ ಕಿರ್ಲೋಸ್ಕರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿದ್ದಾರೆ. ಆತ 2011-2012 ರಲ್ಲಿ ಸದರಿ ಕಂಪನಿಯಲ್ಲಿ ಪ್ರಮೋಶನ್ ಆಗಿ ಮ್ಯಾನೇಜರ್ ಹುದ್ದೆಯಲ್ಲಿ ಇದ್ದ , ಆತ ಸದರಿ ಸ್ವತ್ತನ್ನು ಉಳಿಸಿಕೊಳ್ಳುವ ಸಲುವಾಗಿ ತಾನು ಕೆಲಸ ಮಾಡುತ್ತಿದ್ದ ಕಂಪನಿಯಿಂದ ರೂ 18 ಲಕ್ಷ ಸಾಲವನ್ನು ಪಡೆದು ಮೇಲೆ ಹೇಳಿದ ಬ್ಯಾಂಕಿನ ಸಾಲವನ್ನು ತೀರಿಸಿದ, ನಂತರ ಮೇಲೆ ಹೇಳಿದ ಸದರಿ ಬ್ಯಾಂಕಿನ ದಾವೆ ವಜಾ ಆಯಿತು ಎಂಬುದು ನನಗೆ ಗೊತ್ತಿಲ್ಲ. ಸದರಿ ಸಾಲದ ಹಣವನ್ನು ಪಡೆದುಕೊಳ್ಳುವುದು, ತೀರಿಸುವ ಕೆಲಸವನ್ನು 9 ನೇ ಪ್ರತಿವಾದಿಯೇ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ. ಸದರಿ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಏಕತ್ರ ಕುಟುಂಬದ ಆದಾಯದಿಂದ ಸದರಿ ಸ್ವತ್ತನ್ನು ಖರೀದಿಸಿಲ್ಲ , ಅದನ್ನು 9 ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ಖರೀದಿಸಿದ್ದು ಎಂದು ಹೇಳುವುದು ಸರಿಯಲ್ಲ. ಸಾಲವನ್ನು ಪಡೆಯುವುದಕ್ಕಾಗಿ ನನ್ನ ಹೆಸರನ್ನು ದಾಖಲೆಗಳಲ್ಲಿ ಕಾಣಿಸುದ್ದುದನ್ನು ದುರುಪಯೋಗ ಪಡಿಸಿಕೊಂಡು , ಸದರಿ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ.

ದಾವಾ ಅನೆಕ್ಸರ್ ಬಿ ಸ್ವತ್ತುಗಳಲ್ಲಿ ನಿಮ್ಮ ಹಾಗೂ 13 , 14 ಮತ್ತು 18 ನೇ ಪ್ರತಿವಾದಿಗಳ ಸ್ವತ್ತುಗಳನ್ನು ಸೇರಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಮ್ಮ ಸ್ವತ್ತುಗಳು ತಮಗೆ ಸೇರಿದ ಸ್ವಯಾರ್ಜಿತ

ಸ್ವತ್ತುಗಳಾದ ಕಾರಣ ಅವುಗಳನ್ನು ಸೇರಿಸಿಲ್ಲ ಎಂದು ಉತ್ತರಿಸಿದ್ದಾರೆ. ನಮಗೆ ಸೇರಿದ ಸ್ವತ್ತುಗಳನ್ನು ಬಿಟ್ಟು , ಮಾಧವರಾವರವರಿಗೆ ಸೇರಿದ ಸ್ವತ್ತುಗಳನ್ನು ಮಾತ್ರ ಈ ದಾವೆಯಲ್ಲಿ ಕಾಣಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಮಾಧವರಾವರ ಮತ್ತು ಶಂಕರರಾವರವರ ಮಧ್ಯ ಏಕತ್ರ ಕುಟುಂಬದ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ. ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.11 ಸ್ವತ್ತನ್ನು ಮಾಧವರಾವರವರು ಹರಾಜಿನಲ್ಲಿ ಖರೀದಿಸಿದ್ದರು ಎಂದು ಹೇಳುವುದು ಸರಿಯಲ್ಲ. ಸದರಿ ಹರಾಜಿನಲ್ಲಿ ಖರೀದಿಸಿದ ಸದರಿ ಸ್ವತ್ತಿಗೆ ಸಂಬಂಧಪಟ್ಟ ಖರೀದಿಸಿ ಹಣವನ್ನು ಮಾಧವರಾವರವರು ಮುನ್ಸಿಪಾಲಿಟಿಗೆ ತುಂಬಿ ರಸೀದಿ ಪಡೆದುಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. 1947 ರಲ್ಲಿ ಮಾಧವರಾವರವರು ತೀರಿಹೋದ ನಂತರ ಶಂಕರರಾವರವರು ಮಾಧವರಾವರವರ ಮಕ್ಕಳ ಹೆಸರುಗಳನ್ನು ಸದರಿ ಆಸ್ತಿಯ ದಾಖಲೆಗಳಲ್ಲಿ ದಾಖಲಿಸುವುದನ್ನು ಬಿಟ್ಟು , ತಮ್ಮ ಹೆಸರನ್ನು ದಾಖಲಿಸಿದರು ಎಂದು ಹೇಳುವುದು ಸರಿಯಲ್ಲ. ನಂತರ ಅದು ಸರಿಯಲ್ಲ ಎಂದು ತಿಳಿದು ಬಂದ ನಂತರ, ಶಂಕರರಾವರವರು ವರದಿ ನೀಡಿ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ತಮ್ಮ ಹೆಸರನ್ನು ತೆಗೆದು ಹಾಕಿಸಿ 1 ನೇ ಪ್ರತಿವಾದಿಯ ಹೆಸರನ್ನು ದಾಖಲಿಸಿದರು.

ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.3 ಸ್ವತ್ತನ್ನು ಅಬಿವೃದ್ಧಿ ಪಡಿಸಲು 9 ಮತ್ತು 13 ನೇ ಪ್ರತಿವಾದಿಗಳಿಗೆ ನಾವು ಪಾವರ ಆಫ್ ಅಟಾರ್ನಿ ಬರೆದುಕೊಟ್ಟಿದ್ದೇವು. 13 ನೇ ಪ್ರತಿವಾದಿ 9 ನೇ ಪ್ರತಿವಾದಿಗಿಂತ ದೊಡ್ಡವರು . ಕಾರಣ 13 ನೇ ಪ್ರತಿವಾದಿಯ ಮಾತನ್ನು ನಾವು ಕುಟುಂಬದವರೆಲ್ಲರೂ ಕೇಳುತ್ತಿದ್ದೇವು ಎಂದು ಹೇಳುವುದು ಸರಿಯಲ್ಲ. ಸದರಿ ಸ್ವತ್ತಿನಲ್ಲಿ ವಾಣಿಜ್ಯ ಕಟ್ಟಡ ಕಟ್ಟುವ ಸಲುವಾಗಿ ಕರ್ನಾಟಕ ಬ್ಯಾಂಕಿಗೆ ಸಾಲವನ್ನು ಪಡೆಯಲು ಅರ್ಜಿ ಸಲ್ಲಿಸಿದರು. ಸದರಿ ಬ್ಯಾಂಕಿನವರು ರೂ 24 ಲಕ್ಷ ಸಾಲವನ್ನು ಮಂಜೂರು ಮಾಡಿದರು. ಸದರಿ ಕಟ್ಟಡದ ಒಟ್ಟು ವೆಚ್ಚ ರೂ 40 ಲಕ್ಷ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಕಟ್ಟಡ ಒಟ್ಟು 4 ಮಹಡಿಯದು ಇದ್ದು , ಒಂದೊಂದು ಮಹಡಿ ತಲಾ 2400 ಚದರ ಅಡಿ ವಿಸ್ತೀರ್ಣ ಇವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಎಷ್ಟು ಮಹಡಿಯ ಕಟ್ಟಡ ಎಂಬುದು ತನಗೆ ಗೊತ್ತಿಲ್ಲ ಆದರೆ ಒಂದೊಂದು ಮಹಡಿ ತಲಾ 2400 ಚದರ ಅಡಿ ವಿಸ್ತೀರ್ಣ ಇದೆ ಎಂದು

ಉತ್ತರಿಸಿದ್ದಾರೆ. ಸದರಿ ಸ್ವತ್ತನ್ನು ನಾನು ನೋಡಿದ್ದೇನೆ. ಬ್ಯಾಂಕಿನಿಂದ 24 ಲಕ್ಷ ಹಣವನ್ನು ಪಡೆದ ನಂತರ ಉಳಿದ ಕಟ್ಟಡದ ಕೆಲಸಕ್ಕೆ ಬೇಕಾದ ಹಣವನ್ನು ಯಾರು ಹಾಕಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಕಟ್ಟಡವನ್ನು ಕಟ್ಟಿಸಲು 13 ನೇ ಪ್ರತಿವಾದಿಯು ಬಾಡಿಗೆದಾರರಿಂದ ಸಂಗ್ರಹಿಸಿದ ಹಣವನ್ನು ಹೂಡಿ ಎಂದು ಕೇಳಿಕೊಂಡರು, 13 ನೇ ಪ್ರತಿವಾದಿ ಸದರಿ ಹಣವನ್ನು ಕೊಡಲಿಲ್ಲ ಎಂಬುದು ನನಗೆ ಗೊತ್ತಿಲ್ಲ. ಸದರಿ ಕಟ್ಟಡವನ್ನು ಕಟ್ಟಿಸುವ ಸಲುವಾಗಿ 9 ನೇ ಪ್ರತಿವಾದಿ ಮತ್ತು ಅವರ ತಮ್ಮ ಶಾಂತಾರಾಮರವರು ರೂ 6 ಲಕ್ಷ ಹಣವನ್ನು ತೊಡಗಿಸಿದ್ದರು ಎಂದು ಹೇಳುವುದು ಸರಿಯಲ್ಲ. ಅಲ್ಲದೇ ಅವರು ವೋಲ್ಕ್ಯಾನ ಲೀಸಿಂಗ್ ಫೈನಾನ್ಸ ಲಿಮಿಟೆಡ್ ನಿಂದ ರೂ 5 ಲಕ್ಷ , ಸಿಸಿ ಅರ್ಬನ್ ಕೋಆಪರೇಟಿವ್ ಬ್ಯಾಂಕಿನಿಂದ 5 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡು ಕಟ್ಟಡವನ್ನು ಕಟ್ಟಿಸಿದರು ಎಂಬುದು ನನಗೆ ಗೊತ್ತಿಲ್ಲ. ಈ ರೀತಿ ಅವರಿಬ್ಬರೂ ಒಟ್ಟು 16 ಲಕ್ಷ ರೂ ಹಣವನ್ನು ಸದರಿ ಕಟ್ಟಡ ಕಟ್ಟಲು ತೊಡಗಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಸದರಿ ಕಟ್ಟಡ ಕಟ್ಟಲು ಸಹಾಯ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಕಟ್ಟಡದಲ್ಲಿ 1 ನೇ ಮಹಡಿಯನ್ನು ಕರ್ನಾಟಕ ಬ್ಯಾಂಕ ಲಿಮಿಟೆಡ್ ರವರಿಗೆ 9 ಮತ್ತು 13 ನೇ ಪ್ರತಿವಾದಿ ಲೀಸಿಗೆ ಅಗ್ರೀಮೆಂಟ್ ಮಾಡಿ ಕೊಟ್ಟಿದ್ದರು. ಸದರಿ ಬಾಡಿಗೆ ಹಣವನ್ನು ನೇರವಾಗಿ ಸಾಲದ ಹಣಕ್ಕೆ ಹೋಗಬೇಕು ಎಂದು ನೋಡಿಕೊಂಡಿದ್ದರು ಎಂದು ಹೇಳುವುದು ಸರಿಯಲ್ಲ. ಆ ರೀತಿ ಬಾಡಿಗೆ ಹಣ ನೇರವಾಗಿ ಸಾಲದ ಖಾತೆಗೆ ಜಮಾ ಆಗುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಬಾಡಿಗೆ ಹಣ ಸಾಲದ ಕಂತಿಗೆ ಕಡಿಮೆಯಾಗುತ್ತದೆ ಇನನ್ನೂ ಸ್ವಲ್ಪ ಹಣವನ್ನು ತುಂಬಿ ಎಂದು 13 ನೇ ಪ್ರತಿವಾದಿಗೆ ಬ್ಯಾಂಕಿನವರು ಹೇಳಿದ್ದರು, ಆದರೆ ಅವರು ಅದಕ್ಕೆ ಒಪ್ಪಿರಲಿಲ್ಲ ಎಂದು ಹೇಳುವುದು ಸರಿಯಲ್ಲ. ಆ ಕಾರಣದಿಂದ 13 ನೇ ಪ್ರತಿವಾದಿಯು ಸದರಿ ಕಟ್ಟಡದ ನೆಲಮಹಡಿಯ ಅರ್ಧ ಭಾಗವನ್ನು 32 ರಿಂದ 34 ನೇ ಪ್ರತಿವಾದಿಗಳಿಗೆ ಮಾರಾಗಿ ಮಾಡಲು ನಿರ್ಣಯಿಸಿದರು ಹಾಗೂ ಆ ರೀತಿ ಖರೀದಿ ಕೊಟ್ಟರು ಎಂದು ಹೇಳುವುದು ಸರಿ ಇದೆ . ಸದರಿ ಖರೀದಿ ಹಣವನ್ನು ಸಾಲದ ಖಾತೆಗೆ ನೇರವಾಗಿ ಜಮಾ ಮಾಡಲು 9 ನೇ ಪ್ರತಿವಾದಿ 32 ರಿಂದ 34 ನೇ ಪ್ರತಿವಾದಿಗಳಿಗೆ ಹೇಳಿದ್ದರು ಎಂದು ಹೇಳುವುದು

ಸರಿಯಲ್ಲ. ಆ ವೇರೆಗೆ 32 ರಿಂದ 34 ನೇ ಪ್ರತಿವಾದಿಗಳು ಖರೀದಿ ಹಣದ ಬಗ್ಗೆ ಕರ್ನಟಕ ಬ್ಯಾಂಕ ಹೆಸರಿನಲ್ಲಿ ಚೆಕ್ ಕೊಟ್ಟರು ಎಂದು ಹೇಳುವುದು ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಲು , ಅದರಲ್ಲಿ ಕಟ್ಟಡ ಕಟ್ಟಿಸಲು ನಾನು , 1 ನೇ ವಾದಿ , 13, 14 ಮತ್ತು 18 ನೇ ಪ್ರತಿವಾದಿಗಳು ಯಾವುದೇ ಹಣವನ್ನು ತೊಡಗಿಸಿರುವುದಿಲ್ಲ. ಸದರಿ ಸ್ವತ್ತನ್ನು ಖರೀದಿಸಲು ಹಾಗೂ ಅದರಲ್ಲಿ ಕಟ್ಟಡ ಕಟ್ಟಿಸಲು ಹೇಗೆ ಹಣ ಹೊಂದಾಣಿಕೆ ಮಾಡಲಾಯಿತು ಎಂಬುದನ್ನು ನಾನು 13 ನೇ ಪ್ರತಿವಾದಿಯನ್ನು ಕೇಳಿರುವುದಿಲ್ಲ. ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ 9 ನೇ ಪ್ರತಿವಾದಿ ಎರೆಡು ಬಾರಿ 2004 ಮತ್ತು 2005 ರಲ್ಲಿ ತಮ್ಮ ಸ್ವಂತ ಆದಾಯದಿಂದ ರೂ 2 ಲಕ್ಷ ಹಣವನ್ನು ಬ್ಯಾಂಕಿಗೆ ಕಟ್ಟಿದ್ದರು ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿ ಕಟ್ಟಡದ ಎಲ್ಲ ಬಾಡಿಗೆ ಹಣವನ್ನು ಸ್ವೀಕರಿಸುತ್ತಿದ್ದ ಕಾರಣ , 9 ನೇ ಪ್ರತಿವಾದಿ ಅಸಹಾಯಕರಾಗಿದ್ದರು ಎಂದು ಹೇಳುವುದು ಸರಿಯಲ್ಲ. ನಂತರ ಸದರಿ ಸಾಲದ ಖಾತೆ ಎನ್ ಪಿ ಎ ಆಗಿದ್ದು , ಈಗ ಸದರಿ ಸಾಲಕ್ಕೆ ಸಂಬಂಧಪಟ್ಟಂತೆ 1,34,00,000/- ಲಕ್ಷ ಸಾಲದ ಹಣ ಬಾಕಿ ಉಳಿದಿದೆ ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿ ಸರಿಯಾಗಿ ಸದರಿ ಸಾಲದ ಕಂತನ್ನು ಪಾವತಿ ಮಾಡಿದ್ದಲ್ಲಿ ಅಷ್ಟು ಸಾಲದ ಹಣ ಬಾಕಿ ಆಗುತ್ತಿರಲಿಲ್ಲ ಎಂದು ಹೇಳುವುದು ಸರಿಯಲ್ಲ.

ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.2 ಸ್ವತುತಗಳು ಇದ್ದವು ಎಂದು ತೋರಿಸುವುದರ ಬಗ್ಗೆ ಹಾಗೂ ಅವುಗಳನ್ನು ಮಾರಾಟ ಮಾಡಿದ್ದಾರೆ ಎಂದು ತೋರಿಸುವುದರ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರ ಮಾಡಿರುವುದಿಲ್ಲ. ಪಾರ್ವತಿಬಾಯಿ ನನ್ನ ತಾಯಿ. ನಿಮ್ಮ ತಾಯಿಗೆ ಸೇರಿದ ಎಲ್ಲ ಒಡವೆಗಳು 13 ನೇ ಪ್ರತಿವಾದಿಯ ಬಳಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಈ ದಾವೆಯಲ್ಲಿ ಕಾಣಿಸಿದ ಕಿವಿಯೋಲೆ ಬಿಟ್ಟು ಉಳಿದ ಸ್ವತ್ತುಗಳು ಇದ್ದವು ಎಂದು ಉತ್ತರಿಸಿದ್ದಾರೆ. ನನ್ನ ತಾಯಿ ತಮ್ಮ ಮಗಳು ವಿಮಲಾ ಸಬಾಹಿದರವರಿಗೆ ಅವರ ಮದುವೆ ಸಮಯದಲ್ಲಿ ತಮಗೆ ಸೇರಿದ ಸದರಿ ಕಿವಿಯೋಲೆಯನ್ನು ಕೊಟ್ಟಿದ್ದಾರೆ ಎಂದು ಹೇಳುವುದು ಸರಿ ಇದೆ. ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.2 ರಲ್ಲಿ ಕಾಣಿಸಿದ ಸ್ಕ್ರಾಪ ಮಟಿರಿಯಲ್ಸಗಳು ರೇಗೆ ಆಟೋಸರ್ವಿಸ್‌ಸ ಗೆ ಸೇರಿದ್ದು. ಸದರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಹ ನಾನು

ಯಾವುದೇ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ದಾವಾ ಅನೆಕ್ಸರ್ ಬಿ ಸಿರಿಯಲ್ಲಿ ನಂ.3 ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಾವು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿರುವುದಿಲ್ಲ. ಸದರಿ ಸ್ವತ್ತುಗಳು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ 9 ನೇ ಪ್ರತಿವಾದಿ ಮತ್ತು ಮಾಧವರಾವರವರ ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವುಗಳನ್ನು ಈ ದಾವೆಯಲ್ಲಿ ಕಾಣಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಮೊದಲು ಇದ್ದ ಬಂಗಾರ, ಬೆಳ್ಳಿ ಮತ್ತು ಹಣವನ್ನು ಇತರೆ ಸ್ವತ್ತುಗಳನ್ನು ಖರೀದಿಸುವ ಸಲುವಾಗಿ ಶಂಕರರವರಾರವರೇ ಅವುಗಳನ್ನು 1973 ರ ಮೊದಲು ಉಪಯೋಗಿಸಿದ್ದರು ಎಂದು ಹೇಳುವುದು ಸರಿಯಲ್ಲ. ನಾನು, 1 ನೇ ವಾದಿ , 13, 14 ಮತ್ತು 18 ನೇ ಪ್ರತಿವಾದಿಗಳು ನನ್ನ ತಾಯಿಗೆ ಸೇರಿದ ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ಹಂಚಿಕೊಂಡಿದ್ದೇವೆ.

ನಮ್ಮ ಕುಟುಂಬ ಒಟ್ಟು 40 ಜನರಿಂದ ಕೂಡಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಮನೆಯ ಖರ್ಚು ವೆಚ್ಚ , ಮಕ್ಕಳ ವಿದ್ಯಾಭ್ಯಾಸ , ಮದುವೆ ಮತ್ತು ಇತರೆ ಕಾರ್ಯಗಳು ರೇಗೆ ಬ್ರದರ್ಸ ಜನರಲ್ ಮರ್ಚಂಟ ಅಂಗಡಿಯಿಂದ ಬರುವ ಆದಾಯದಿಂದಲೇ ನಡೆಯುತ್ತಿತ್ತು ಎಂಬುದು ನನಗೆ ಗೊತ್ತಿಲ್ಲ. ನಂತರ ರೇಗೆ ಅಟೋಸರ್ವಿಸಸ್ ನಿಂದ ಬರುವ ಆದಾಯದಿಂದಲೇ ನಡೆಯುತ್ತಿತ್ತು ಎಂದು ಹೇಳುವುದು ಸರಿಯಲ್ಲ. ಸದರಿ ಒಟ್ಟು ಕುಟುಂಬವನ್ನು ನಡೆಸಲು ನಾನು ಯಾವುದೇ ಹಣವನ್ನು ಹೂಡಿಲ್ಲ ಎಂದು ಹೇಳುವುದು ಸರಿಯಲ್ಲ. ನಾನು ಒಟ್ಟು ಕುಟುಂಬಕ್ಕೆ ಯಾವುದೇ ಹಣವನ್ನು ಹೂಡದೇ ಇದ್ದರೂ , ಹೂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಏನಾದರೂ ಹಣ ದುರುಪಯೋಗವಾಗಿದ್ದಲ್ಲಿ , ಅದನ್ನು 13 ನೇ ಪ್ರತಿವಾದಿಯೇ ಮಾಧವರಾವರವರ ವಾರಸುದಾರರಿಗೆ ಕೊಡಬೇಕಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಮಾಧವರಾವ ಮತ್ತು ಶಂಕರರಾವರವರು ಯಾವತ್ತೂ ಒಟ್ಟು ಕುಟುಂಬದಲ್ಲಿ ವಾಸಮಾಡಿಕೊಂಡಿರಲಿಲ್ಲ , ಅವರಿಬ್ಬರದು ಪ್ರತ್ಯೇಕ ಕುಟುಂಬಗಳಾಗಿದ್ದವು ಎಂದು ಹೇಳುವುದು ಸರಿಯಲ್ಲ. ಅವರಿಬ್ಬರು ಒಟ್ಟು ಕುಟುಂಬದಲ್ಲಿ ವಾಸಮಾಡಿಕೊಂಡಿದ್ದರು ಎಂದು ತೋರಿಸುವುದಕ್ಕೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ.

ಪಿಡಬ್ಲ್ಯು. 1

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ.ಹಾಗೂ ಸಿಜೆಎಂ,
ಧಾರವಾಡ.